**All India Radio: Bangalore**
**National Bulletin In Kannada**
**25.03.2026  19.35 hrs**

**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

**25.03.2026  19.35 hrs**

***************

**ಮುಖ್ಯಾಂಶಗಳು**

1. **ಲೋಕಸಭೆಯಲ್ಲಿ 2026ರ ಹಣಕಾಸು ವಿಧೇಯಕಕ್ಕೆ ಅಂಗೀಕಾರ: ಎಂಎಸ್‌ಎಂಇ, ರೈತರು ಹಾಗೂ ಸಹಕಾರಿ ಕ್ಷೇತ್ರಕ್ಕೆ ಸರ್ಕಾರದ ಒತ್ತಾಸೆ – ನಿರ್ಮಲಾ ಸೀತಾರಾಮನ್**
2. **ಪಶ್ಚಿಮ ಏಷ್ಯಾ ವಿದ್ಯಮಾನ ಕುರಿತಂತೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅಧ್ಯಕ್ಷತೆಯಲ್ಲಿ ನಡೆದ ಸರ್ವಪಕ್ಷ ಸಭೆ**
3. **ಸುಮಾರು 29 ಸಾವಿರ ಕೋಟಿ ರೂಪಾಯಿ ಗಾತ್ರದ ಪುನರ್ ರೂಪಿತ ಉಡಾನ್ ಕಾರ್ಯಕ್ರಮಕ್ಕೆ ಕೇಂದ್ರ ಸಚಿವ ಸಂಪುಟದ ಒಪ್ಪಿಗೆ**
4. **ದೇಶದಲ್ಲಿ ರಸಗೊಬ್ಬರ ಕೊರತೆ ಇಲ್ಲ – ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್**

***************

ಲೋಕಸಭೆ ಧ್ವನಿ ಮತದ ಮೂಲಕ 2026ರ ಹಣಕಾಸು ವಿಧೇಯಕಕ್ಕೆ ಅಂಗೀಕಾರ ನೀಡಿದೆ. 2026–27ನೇ ಸಾಲಿಗಾಗಿ ಕೇಂದ್ರ ಸರ್ಕಾರದ ಹಣಕಾಸು ಪ್ರಸ್ತಾಪಗಳಿಗೆ ಅನುಮೋದನೆ ಪಡೆಯುವ ಮಸೂದೆ ಇದಾಗಿದೆ.

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ವಿಧೇಯಕ ಕುರಿತಾದ ಚರ್ಚೆಗೆ ಉತ್ತರ ನೀಡಿ, ಅತಿ ಸಣ್ಣ, ಸಣ್ಣ ಹಾಗೂ ಮಧ್ಯಮ ಗಾತ್ರದ ಉದ್ದಿಮೆದಾರರು, ರೈತರು ಹಾಗೂ ಸಹಕಾರಿ ಕ್ಷೇತ್ರಗಳನ್ನು ಸರ್ಕಾರ ಸಬಲಗೊಳಿಸುತ್ತಿದೆ. ಎಂಎಸ್‌ಎಂಇ, ಕೃಷಿ ಹಾಗೂ ಸಹಕಾರಿ ಕ್ಷೇತ್ರಗಳು ಉದ್ಯೋಗ ಸೃಷ್ಟಿ ಹಾಗೂ ಉತ್ಪಾದನೆ ವಿಚಾರದಲ್ಲಿ ದೇಶದ ಸಮಗ್ರ ಅಭಿವೃದ್ಧಿಯ ಕೇಂದ್ರಗಳಾಗಿವೆ ಎಂದರು.

ಡಿಜಿಟಲ್ ಮೂಲಸೌಕರ್ಯ, ವಿದ್ಯುನ್ಮಾನ ತಯಾರಿಕೆ, ಸಾಗರ ಉತ್ಪನ್ನ, ಚರ್ಮ ಉತ್ಪನ್ನ, ಖನಿಜ ಅಣುವಿದ್ಯುತ್‌ಶಕ್ತಿ ಮೊದಲಾದ ಪ್ರಮುಖ ಕ್ಷೇತ್ರಗಳಿಗೆ ಸರ್ಕಾರ ಬೆಂಬಲ ನೀಡುತ್ತಿದೆ. ಸರ್ಕಾರ ಖಚಿತತೆ, ನಿಖರತೆ, ಬದ್ಧತೆ ಹಾಗೂ ವಿಶ್ವಾಸಗಳಿಂದ ಸುಧಾರಣೆಗಳನ್ನು ತರುತ್ತಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ದೇಶ ಸುಧಾರಣೆಗಳನ್ನು ತ್ವರಿತಗತಿಯಲ್ಲಿ ತರುತ್ತಿದೆ ಎಂದು ತಿಳಿಸಿದರು.

ಹಣಕಾಸು ವಿಧೇಯಕ ಮಧ್ಯಮ ವರ್ಗ ಕೇಂದ್ರೀಕೃತವಾಗಿದ್ದು, 17 ಜೀವ ರಕ್ಷಕ ಔಷಧಿಗಳಿಗೆ ಸರ್ಕಾರ ಕಸ್ಟಮ್ಸ್ ತೆರಿಗೆಯಿಂದ ವಿನಾಯಿತಿ ನೀಡಿದೆ ಎಂದು ಹೇಳಿದರು.

2026–27ರ ಹಣಕಾಸು ಮಸೂದೆ ಐದು ಸ್ಪಷ್ಟ ತತ್ವಗಳ ಮೇಲೆ ಆಧಾರಿತವಾಗಿದೆ. ವಿಶ್ವಾಸ ಆಧಾರಿತ ತೆರಿಗೆ ಆಡಳಿತ ಜನಸಾಮಾನ್ಯರಿಗೆ ಸುಲಭ ಜೀವ ನಿರ್ವಹಣೆ ಸುಧಾರಣೆ, ಎಂಎಸ್‌ಎಂಇ, ರೈತರು ಮತ್ತು ಸಹಕಾರಿಗಳ ಸಶಕ್ತೀಕರಣ, ಭಾರತವನ್ನು ಜಾಗತಿಕ ಕೇಂದ್ರವಾಗಿ ಬಲಪಡಿಸುವುದು ಮತ್ತು ಸುಗಮ ವ್ಯಾಪಾರ ಸೌಲಭ್ಯ ಮತ್ತು ಕಸ್ಟಮ್ಸ್ ಸುಧಾರಣೆಗಳನ್ನು ಇದು ಒಳಗೊಂಡಿದೆ ಎಂದರು.

***************

ಪಶ್ಚಿಮ ಏಷ್ಯಾ ಸಂಘರ್ಷದ ವಿದ್ಯಮಾನ ಕುರಿತಂತೆ ಸರ್ಕಾರ ಕರೆದಿರುವ ಸರ್ವಪಕ್ಷ ಸಭೆ ಸಂಸತ್ ಸದನದ ಸಂಕೀರ್ಣದಲ್ಲಿ ನಡೆಯಿತು.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಗೃಹ ಸಚಿವ ಅಮಿತ್ ಶಾ, ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್, ಪೆಟ್ರೋಲಿಯಂ ಖಾತೆ ಸಚಿವ ಹರ್ದೀಪ್ ಸಿಂಗ್ ಪುರಿ, ಸಂಸದೀಯ ವ್ಯವಹಾರಗಳ ಖಾತೆ ಸಚಿವ ಕಿರಣ್ ರಿಜಿಜು, ಜೆಡಿಯು ಕಾರ್ಯಾಧ್ಯಕ್ಷ ಸಂಜಯ್ ಜಾ ಮತ್ತು ರಾಜೀವ್ ರಂಜನ್ ಸಿಂಗ್ ಸೇರಿದಂತೆ ಹಲವು ಮುಖಂಡರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಕಾಂಗ್ರೆಸ್ ಧುರೀಣ ಮುಕುಲ್ ವಾಸಿನಿಕ್ ಮತ್ತು ತಾರೀಖ್ ಅನ್ವರ್, ಸಿಪಿಐಎಂನ ಸಂಸದ ಜಾನ್ ಬ್ರಿಟ್ಟಸ್ ಮತ್ತು ವಿಪಕ್ಷಗಳ ಧುರೀಣರು ಪಾಲ್ಗೊಂಡಿದ್ದರು. ಪಶ್ಚಿಮ ಏಷ್ಯ ಸಂಘರ್ಷದಿಂದಾಗಿ ಸಾಗರ ಸರಕು ಸಾಗಾಟ ಕಾರಿಡಾರ್‌ನ ಮೇಲೆ ಉಂಟಾಗಿರುವ ವ್ಯತ್ಯಯ ಮತ್ತು ಕೊಲ್ಲಿ ರಾಷ್ಟ್ರಗಳಲ್ಲಿ ಭಾರತೀಯರ ಸುರಕ್ಷತೆ ಕುರಿತ ಕಾಳಜಿ ಹಿನ್ನೆಲೆಯಲ್ಲಿ ಈ ಸಭೆ ನಡೆಯಿತು. ಪ್ರಧಾನಿ ನರೇಂದ್ರ ಮೋದಿ ಅವರು, ಸಂಸತ್ತಿನಲ್ಲಿ ಪಶ್ಚಿಮ ಏಷ್ಯಾ ಸಂಘರ್ಷ ಕುರಿತಂತೆ ನೀಡಿದ್ದ ಹೇಳಿಕೆ ಹಿನ್ನೆಲೆಯಲ್ಲಿ ಈ ಸರ್ವಪಕ್ಷ ಸಭೆ ನಡೆಯಿತು.

***************

ವಿದೇಶಾಂಗ ವ್ಯವಹಾರ ಖಾತೆ ಸಚಿವ ಡಾ.ಎಸ್.ಜೈಶಂಕರ್ ನವದೆಹಲಿಯಲ್ಲಿಂದು ಅಮೆರಿಕಾದ ಯುದ್ಧ ಅಧೀನಕಾರ್ಯದರ್ಶಿ ಎಲ್.ಬ್ರಿಡ್ಜ್ ಕಾಲ್ ಬಿ ಅವರನ್ನು ಭೇಟಿ ಮಾಡಿದರು.

ಈ ಸಂದರ್ಭದಲ್ಲಿ ಪ್ರಸ್ತುತ ಭೌಗೋಳಿಕ ರಾಜಕೀಯ ವಿದ್ಯಮಾನಗಳ ಬಗ್ಗೆ ವಿಚಾರ ವಿನಿಮಯ ಮಾಡಿಕೊಳ್ಳಲಾಯಿತು ಎಂದು ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದರು.

ಈ ಮಧ್ಯೆ, ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಅವರೂ ಕೂಡ ಎಲ್‌ಬ್ರಿಡ್ಜ್ ಕಾಲ್ ಬಿ ಅವರನ್ನು ಭೇಟಿ ಮಾಡಿದರು. ದ್ವಿಪಕ್ಷೀಯ ರಕ್ಷಣಾ ಸಹಕಾರ, ಪ್ರಾದೇಶಿಕ ಭದ್ರತೆ ಹಾಗೂ ಕಾರ್ಯತಂತ್ರಾತ್ಮಕ ಸಹಭಾಗಿತ್ವದ ಬಲವರ್ಧನೆ ಕುರಿತಂತೆ ವಿಚಾರ ವಿನಿಮಯ ನಡೆಸಿದರು.

***************

ಆಕಾಶವಾಣಿ ನಾಳೆಯಿಂದ ತನ್ನ ಬೆಳಗಿನ ಪ್ರಸಾರವನ್ನು ರಾಷ್ಟ್ರೀಯ ಗೀತೆ ವಂದೇ ಮಾತರಂ ಸಂಪೂರ್ಣ ಅವತರಣಿಕೆಯನ್ನು ಪ್ರಸಾರ ಮಾಡುವ ಮೂಲಕ ಆರಂಭಿಸಲಿದೆ.

ಆಕಾಶವಾಣಿ ಸ್ವಾತಂತ್ರ್ಯ ನಂತರದಿಂದ ಪ್ರತಿ ದಿನ ಬೆಳಗ್ಗೆ ತನ್ನ ಪ್ರಸಾರವನ್ನು ಪಾರಂಪರಿಕ ಧ್ವನಿ ಮುದ್ರಿಕೆ ಬಳಿಕ ವಂದೇ ಮಾತರಂ ಗೀತೆಯ ಎರಡು ಚರಣಗಳೊಂದಿಗೆ ಆರಂಭಿಸುತ್ತಿತ್ತು. ಗೃಹ ಸಚಿವಾಲಯ ಇತ್ತೀಚೆಗೆ ನೀಡಿದ ನಿರ್ದೇಶನದ ಮೇರೆಗೆ ಆಕಾಶವಾಣಿಯ ಎಲ್ಲಾ ಕೇಂದ್ರಗಳು ವಂದೇ ಮಾತರಂ ರಾಷ್ಟ್ರೀಯ ಗೀತೆಯ ಸಂಪೂರ್ಣ ಅವತರಣಿಕೆಯೊಂದಿಗೆ ಪ್ರಸಾರವನ್ನು ಆರಂಭಿಸಲಿದೆ. ಸಂಪೂರ್ಣ ಅವತರಣಿಕೆ 3 ನಿಮಿಷ 10 ಸೆಕೆಂಡ್ ಅವಧಿಯದ್ದಾಗಿದೆ ಎಂದು ವಾರ್ತಾ ಮತ್ತು ಪ್ರಸಾರ ಸಚಿವಾಲಯ ತಿಳಿಸಿದೆ.

ಹಿಂದಿ ಶಾಸ್ತ್ರೀಯ ಗಾಯಕ ಪಂಡಿತ್ ಚಂದ್ರಶೇಖರ್ ವಝೆ ರಾಗ್ ದೇಸ್‌ನಲ್ಲಿ ಈ ಗೀತೆಯನ್ನು ಹಾಡಿದ್ದಾರೆ. ಸಂಗೀತದ ವೈವಿಧ್ಯತೆಯನ್ನು ಸಾದರಪಡಿಸುವ ನಿಟ್ಟಿನಲ್ಲಿ ಸಂಪೂರ್ಣ ಗೀತೆಯನ್ನು ಪ್ರಾದೇಶಿಕ ಭಾಷೆ ಅವತರಣಿಕೆಯಲ್ಲೂ ಕೂಡ ಧ್ವನಿ ಮುದ್ರಿಸಲಾಗುತ್ತಿದೆ. ಈ ಅವತರಣಿಕೆಯನ್ನು ಆಯಾ ರಾಜ್ಯಗಳಲ್ಲಿನ ಆಕಾಶವಾಣಿ ಕೇಂದ್ರಗಳು ಅನುರೂಪಗೊಳಿಸಿಕೊಳ್ಳಲಿವೆ ಎಂದು ಸಚಿವಾಲಯ ತಿಳಿಸಿದೆ.

***************

ಪುನರ್ ರೂಪಿತ ಪ್ರಾದೇಶಿಕ ಸಂಪರ್ಕ ಯೋಜನೆ– ಉಡಾನ್ ಕಾರ್ಯಕ್ರಮಕ್ಕೆ ಕೇಂದ್ರ ಸಚಿವ ಸಂಪುಟ ಒಪ್ಪಿಗೆ ನೀಡಿದೆ. 28 ಸಾವಿರದ 840 ಕೋಟಿ ರೂಪಾಯಿ ಗಾತ್ರದ ಯೋಜನೆ ಇದಾಗಿದೆ.

2026–27 ರಿಂದ 10 ವರ್ಷಗಳ ಅವಧಿಯಲ್ಲಿ ಈ ಯೋಜನೆ ಜಾರಿಗೊಳ್ಳಲಿದೆ. ಕೇಂದ್ರ ಸಚಿವ ಸಂಪುಟ ಸಭೆಯ ನಂತರದ ವಾರ್ತಾ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್, ಸುದ್ದಿಗಾರರಿಗೆ ಈ ವಿಷಯ ತಿಳಿಸಿ, ಪ್ರಾದೇಶಿಕ ಸಂಪರ್ಕ ಹೆಚ್ಚಿಸಲು ಈಗಿರುವ ಏರ್‌ಸ್ಟ್ರಿಪ್ ಬದಲಾಗಿ 100 ವಿಮಾನ ನಿಲ್ದಾಣಗಳನ್ನು ಅಭಿವೃದ್ಧಿಪಡಿಸಲಾಗುವುದು. ಇದು ಆರ್ಥಿಕ ಪ್ರಗತಿಗೆ ಪೂರಕವಾಗಿದೆ. ಎರಡು ಮತ್ತು ಮೂರನೇ ಹಂತದ ನಗರಗಳಿಗೆ ವ್ಯಾಪಾರ ಮತ್ತು ಪ್ರವಾಸೋದ್ಯಮಕ್ಕೆ ಅವಕಾಶ ಕಲ್ಪಿಸುತ್ತದೆ. ದೂರದ ಭಾಗಗಳಿಗೆ ತುರ್ತು ಸಂದರ್ಭಗಳಲ್ಲಿ ಆರೋಗ್ಯ ಉಪಚಾರಗಳಿಗೂ ಅವಕಾಶ ಕಲ್ಪಿಸಲಾಗಿದೆ ಎಂದರು.

ಮೂಲತಃ 2016 ರಲ್ಲಿ ಆರಂಭಿಸಲಾದ ಉಡಾನ್ ಯೋಜನೆ ಕಳೆದ 9 ವರ್ಷಗಳಲ್ಲಿ 95 ಏರ್‌ಪೋರ್ಟ್, ಹೆಲಿಪೋರ್ಟ್, ವಾಟರ್ ಏರೋಡ್ರಮ್ ಮುಖಾಂತರ 663 ಮಾರ್ಗಗಳಲ್ಲಿ ಸೇವೆ ಕಲ್ಪಿಸಲಾಗಿದೆ. ಸಚಿವ ಸಂಪುಟ ವಲಸೆ, ವೀಸಾ, ವಿದೇಶಿಯರ ನೋಂದಣಿ ಮತ್ತು ಟ್ರ್ಯಾಕಿಂಗ್ ಯೋಜನೆ ಮುಂದುವರಿಕೆಗೆ 1 ಸಾವಿರದ 800 ಕೋಟಿ ರೂಪಾಯಿ ಒದಗಿಸಲು ಅನುಮೋದನೆ ನೀಡಿದೆ. ಈ ಯೋಜನೆ ಬರುವ ಏಪ್ರಿಲ್ 1 ರಿಂದ ಐದು ವರ್ಷಗಳ ಕಾಲ ಮುಂದುವರೆಯಲಿದೆ.

***************

ದೇಶದಲ್ಲಿ ರಸಗೊಬ್ಬರ ಕೊರತೆ ಇಲ್ಲ ಎಂದು ಕೇಂದ್ರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಖಾತೆ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಹೇಳಿದ್ದಾರೆ.

ಅವರು ಉತ್ತರ ಪ್ರದೇಶದ ಗೋರಖ್ ಪುರದಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿ, ರೈತರು ಯಾವುದೇ ರೀತಿಯ ಕೊರತೆ ಎದುರಿಸಲು ಬಿಡುವುದಿಲ್ಲ ಎಂದರು.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಪ್ರತಿ ಸಮಸ್ಯೆಯನ್ನು ಪರಿಹರಿಸಲಾಗುವುದು ಎಂದು ಹೇಳಿದರು.

***************

ದೇಶ ಸುಸ್ಥಿರ ಭವಿಷ್ಯದತ್ತ ರೂಪಾಂತರಗೊಳ್ಳುತ್ತಿರುವ ಕಾಲಘಟ್ಟದಲ್ಲಿದೆ ಎಂದು ಕೇಂದ್ರ ಭಾರಿ ಕೈಗಾರಿಕೆ ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ.

ಅವರು ದೆಹಲಿಯಲ್ಲಿಂದು ಭಾರಿ ಕೈಗಾರಿಕೆ ಸಚಿವಾಲಯದ ಸಲಹಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು, ದೇಶವನ್ನು ಜಾಗತಿಕ ತಯಾರಿಕಾ ಶಕ್ತಿ ಕೇಂದ್ರವಾಗಿ ಹಾಗೂ ಉನ್ನತ ರಫ್ತು ಕೇಂದ್ರವನ್ನಾಗಿ ರೂಪಾಂತರಿಸುವಲ್ಲಿ ವಿಕಸಿತ ಭಾರತ 2047 ಮಾರ್ಗಸೂಚಿಯಾಗಿದೆ ಎಂದು ಹೇಳಿದರು.

***************

ಮುಂದಿನ ತಿಂಗಳ 9 ರಂದು ಮತದಾನ ನಿಗದಿಯಾಗಿರುವ ಅಸ್ಸಾಂ, ಕೇರಳ, ತಮಿಳುನಾಡು, ಪಶ್ಚಿಮ ಬಂಗಾಳ ಹಾಗೂ ಪುದುಚೆರಿ ಮತ್ತು ಉಪಚುನಾವಣೆ ನಿಗದಿಯಾಗಿರುವ 6 ರಾಜ್ಯಗಳ ಸಂಬಂಧಪಟ್ಟ ಕ್ಷೇತ್ರಗಳಲ್ಲಿ ಇಂದು ನಾಮಪತ್ರ ಪರಿಶೀಲನೆ ಕಾರ್ಯ ನಡೆಯಿತು.

ಈ ಕ್ಷೇತ್ರಗಳಲ್ಲಿ ನಾಮಪತ್ರ ಹಿಂತೆಗೆದುಕೊಳ್ಳಲು ಗುರುವಾರ ಕೊನೆ ದಿನವಾಗಿದೆ.

***************

ಕೇಂದ್ರ ಸರ್ಕಾರ ಎಐ ಮಿಷನ್ ಅಡಿ ಒಟ್ಟು 190 ಯೋಜನೆಗಳಿಗೆ ಅನುಮೋದನೆ ನೀಡಿದೆ. ಇವುಗಳಲ್ಲಿ 78 ಯೋಜನೆಗಳು ಸರ್ಕಾರದ ಸಂಸ್ಥೆಗಳು 46 ಯೋಜನೆಗಳು ನವೋದ್ಯಮ ಮತ್ತು ಎಂಎಸ್ಎಂಇ ಹಾಗೂ 27 ಯೋಜನೆಗಳು ಶೈಕ್ಷಣಿಕ ಸಂಶೋಧನಾರ್ಥಿಗಳಿಗೆ ಸಂಬಂಧಿಸಿದೆ ಎಂದು ಲೋಕಸಭೆಯಲ್ಲಿಂದು ತಿಳಿಸಲಾಗಿದೆ.

***************

ಒಡಿಶಾದ ಪುರಿಯ ಶ್ರೀ ಜಗನಾಥ ದೇವಾಲಯದಲ್ಲಿ 48 ವರ್ಷಗಳ ನಂತರ ಇಂದು ರತ್ನ ಭಂಡಾರ ಪರಿಶೀಲನಾ ಕಾರ್ಯ ಆರಂಭವಾಗಿದೆ. ಈ ಸಂದರ್ಭದಲ್ಲಿ ದೇವರ ಪ್ರತಿ ಆಭರಣವನ್ನು ತೂಕಮಾಡಿ 1978 ರ ದಾಖಲೆಯೊಂದಿಗೆ ಹೋಲಿಸಿ ನೋಡಲಾಗುತ್ತಿದೆ.

ಪ್ರಸ್ತುತ ಆಭರಣಗಳ ಹಣಕಾಸು ಮೌಲ್ಯವನ್ನು ಲೆಕ್ಕಚಾರ ಮಾಡಲಾಗುತ್ತಿಲ್ಲ. ಕೇವಲ ದಾಖಲೆ ದೃಢೀಕರಣ ಮಾಡಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

***************

ಛತ್ತೀಸ್‌ಗಢದಲ್ಲಿಂದು ಮಾವೋವಾದಿ ಸಂಘಟನೆಯ ಹಿರಿಯ ನೇತಾರ ಪಾಪರಾವ್ ಸೇರಿದಂತೆ ಒಟ್ಟು 18 ಮಾವೋವಾದಿಗಳು ಇಂದು ಶರಣಾಗತರಾಗಿದ್ದಾರೆ.

ಶಸ್ತ್ರ ತ್ಯಜಿಸಿ ಮುಖ್ಯ ಜನವಾಹಿನಿಗೆ ಸೇರಲು ಬಯಸಿರುವ ಶರಣಾಗತರಲ್ಲಿ 7 ಮಂದಿ ಮಹಿಳೆಯರು ಇದ್ದಾರೆ.

***************

ದೇಶದ ಸಮೃದ್ಧ ಸಂಗೀತ ಪರಂಪರೆಯನ್ನು ವಿಶ್ವಾದ್ಯಂತ ಪಸರಿಸುವ ಉದ್ದೇಶದಿಂದ ಕೇಂದ್ರ ಸಂಸ್ಕೃತಿ ಸಚಿವಾಲಯ ಯುಟ್ಯೂಬ್ ಇಂದು ತಿಳಿವಳಿಕೆ ಪತ್ರ ವಿನಿಮಯ ಮಾಡಿಕೊಂಡಿದೆ.

ಸಂಸ್ಕೃತಿ ಖಾತೆ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಈ ಸಂದರ್ಭದಲ್ಲಿ ಮಾತನಾಡಿ, ದೇಶದ ಜಾನಪದ ಹಾಗೂ ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಈ ಉಪಕ್ರಮ ಪ್ರಮುಖವಾಗಿದೆ ಎಂದರು.

*******ಮುಕ್ತಾಯ********